# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಚನ್ನನಗೌಡ, ಅಧ್ಯಕ್ಷರು, ರಾಮತ್ನಾಳ ಗ್ರಾಮ ಪಂಚಾಯಿತಿ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಉಪಲೋಕಾಯುಕ್ತ ರವರ ಪತ್ರ ಸಂಖ್ಯೆ ಉಪಲೋಕ್/ಜಿಎಲ್‌ಬಿ-1915/2016/ಎಆರ್‌ಇ-5 ದಿನಾಂಕ:12.06.2017.
2. ಸರ್ಕಾರದ ಪತ್ರ ಸಂಖ್ಯೆ: ಸಂ.ಗ್ರಾಅಪ:536:ಗ್ರಾಪಂಕಾ:2017, ದಿನಾಂಕ:01.07.2017, ರ ಕಾರಣ ಕೇಳುವ ನೋಟಿಸ್ಸು.
3. ಶ್ರೀ ಚನ್ನನಗೌಡ, ಅಧ್ಯಕ್ಷರು, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 24.07.2017
4. ವಿಚಾರಣೆಗೆ ಹಾಜರಾಗುವ ತಿಳುವಳಿಕೆ ಪತ್ರ ದಿನಾಂಕ: 11.08.2017.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಮಾನ್ಯ ಉಪಲೋಕಾಯುಕ್ತರು, ದಿನಾಂಕ:12.06.2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3) ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ಚನ್ನನಗೌಡ, ಅಧ್ಯಕ್ಷರು, ರಾಮತ್ನಾಳ ಗ್ರಾಮ ಪಂಚಾಯಿತಿಯಲ್ಲಿ ಸರ್ವೆ ನಂ.92 ರಲ್ಲಿ ಕಾಲುವೆ ಹೂಳೆತ್ತೆವು ಕಾಮಗಾರಿ ಮಾಡದೇ ಖೋಟಾ ಬಿಲ್‌ಗಳನ್ನು ಮಾಡಿ ಹಣ ದುರುಪಯೋಗ ಮಾಡಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 48(4) ಮತ್ತು 43(ಎ) ರ ಅಡಿಯಲ್ಲಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟಿಸ್ಸನ್ನು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ಕಾರಣ ಕೇಳುವ ನೋಟಿಸ್ಸಿಗೆ ತಮ್ಮ ಲಿಖಿತ ಹೇಳಿಕೆಯಲ್ಲಿ, ರಾಮತ್ನಾಳ ಗ್ರಾಮ ಪಂಚಾಯಿತಿಯಲ್ಲಿ ಸರ್ವೆ ನಂ.92 ರಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲವೆಂದು ಸದರಿ ಸರ್ವೆ ನಂಬರ್‌ನಲ್ಲಿ ಕಾಮಗಾರಿಯನ್ನು ಕೈಗೊಳ್ಳದ ಬಗ್ಗೆ ರಾಮತ್ನಾಳ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ದೃಢೀಕರಣ ಪ್ರಮಾಣ ಪತ್ರ ನೀಡಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು ರಾಮತ್ನಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ವೆ ನಂ.95 ರಲ್ಲಿ ಹೂಳೆತ್ತುವ ಕಾಮಗಾರಿಯನ್ನು ಪಂಚಾಯಿತಿ ವತಿಯಿಂದ ಕೈಗೊಂಡಿದ್ದು ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಲೋಕಾಯುಕ್ತರಿಗೆ ಎಲ್ಲಾ ದಾಖಲಾತಿಗಳೊಂದಿಗೆ ಪ್ರಕರಣವನ್ನು ಕೈಬಿಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಯಚೂರು ಜಿಲ್ಲೆ ರವರು ದಿನಾಂಕ:02.08.2017 ರಂದು ವರದಿ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

ದಿನಾಂಕ:03.08.2016 ರಂದು ರಾಮತ್ನಾಳ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಸಭೆಯನ್ನು ಆಯೋಜಿಸಿದ್ದು, ಅಧ್ಯಕ್ಷತೆಯನ್ನು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಸಿಂಧನೂರು ಇವರು ವಹಿಸಿದ್ದು ಅಧ್ಯಕ್ಷರ ಸಮಕ್ಷಮದಲ್ಲಿ ರಾಮತ್ನಾಳ ಗ್ರಾಮ ಪಂಚಾಯಿತಿಯ ಅಧೀನದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ 43 ಕಾಮಗಾರಿಗಳನ್ನು ಕೈಗೊಂಡು ಸದರಿ ಕಾಮಗಾರಿಗಳಲ್ಲಿ ಗ್ರಾಮಸ್ಥರಿಂದ ಯಾವುದೇ ತಕರಾರು ಆಕ್ಷೇಪಣೆಗಳು ಬಂದಿರುವುದಿಲ್ಲ ಸರ್ವೆ ನಂ.95 ರಲ್ಲಿ ಕಾಮಗಾರಿಯ ಬಿಲ್ ಪಾವತಿಯಲ್ಲಿ ಯಾವುದೇ ವಿಳಂಬ ನೀತಿಯನ್ನು ಅಧ್ಯಕ್ಷನಾದ ನಾನು ಅನುಸರಿಸಿರುವುದಿಲ್ಲವೆಂದು ಹಾಗೂ ನನ್ನ ಗಣಕಯಂತ್ರಕ್ಕೆ ಶಾಖಾಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಣ ಸಂದಾಯ ಮಾಡಿದ ನಂತರ ನನ್ನ ಲಾಗೀನ್‌ಗೆ ಬರುವುದಾಗಿ ಅದನ್ನು 7 ದಿವಸಗಳ ಒಳಗಾಗಿ ಹಣ ಪಾವತಿಸಲಾಗಿದೆಂದು ತಿಳಿಸಿರುತ್ತಾರೆ.

ಸದರಿ ಸರ್ವೆ ನಂ.95 ರ ಕಾಮಗಾರಿಗೆ ಸಂಬಂಧಿಸಿದ ದೂರು ಸತ್ಯಕ್ಕೆ ದೂರವಾಗಿದ್ದು, ಸದರಿ ಪ್ರಕರಣದಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲವೆಂಬುವುದನ್ನು ಪರಿಗಣಿಸಿ ಸದರಿ ಪ್ರಕರಣವನ್ನು ಕೈಬಿಡಲು ವಿನಂತಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಶ್ರೀ ಚನ್ನನಗೌಡ, ಅಧ್ಯಕ್ಷರು, ರಾಮತ್ನಾಳ ಗ್ರಾಮ ಪಂಚಾಯಿತಿ, ರವರಿಗೆ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ ನೀಡಲಾಗಿದ್ದು, ಸದರಿಯವರು ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದ ವಿಚಾರಣೆಗೆ ಹಾಜರಿದ್ದು ತಮ್ಮ ಹೇಳಿಕೆ ನೀಡಿರುತ್ತಾರೆ. ಮಾನ್ಯ ಪ್ರಧಾನ ಕಾರ್ಯದರ್ಶಿರವರು ಸದರಿ ಪ್ರಕರಣದ ವರದಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರಿಂದ ತರಿಸುವಂತೆ ಸೂಚಿಸಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ದಿನಾಂಕ:30.11.2017 ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕ ಸೆಕ್ಷನ್ 10(2) ರ ಪ್ರಕಾರ ಉದ್ಯೋಗಕ್ಕಾಗಿ ಸಲ್ಲಿಸಿದ ಅರ್ಜಿಗಳನ್ನು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳು ಸ್ವೀಕರಿಸಬೇಕು ಎಂದು ನಮೂದಿಸಲಾಗಿದೆ ಆದರೆ ಈ ಪ್ರಕರಣದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಅಧಿಕಾರ ವ್ಯಾಪ್ತಿ ಮೀರಿ ನಮೂನೆ-6 ನ್ನು ಸ್ವೀಕರಿಸಿರುತ್ತಾರೆ. (ಅನುಬಂಧ-2ಎ) ಕೆಲಸಕ್ಕೆ ಹಾಜರಾಗಲು ಕೂಲಿಕಾರರಿಗೆ ನಮೂನೆ-8 ನ್ನು ವಿತರಿಸಿರುವುದಿಲ್ಲ.
- ಕಾಮಗಾರಿಗೆ ಬಳಸಲಾದ 2 ಎನ್.ಎಂ.ಆರ್ ಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಾಗಭೂಷಣ ಇವರು ಸೃಜಿಸಿರುತ್ತಾರೆ. ಮೊದಲನೇ ಎನ್.ಎಂ.ಆರ್ ಸಂಖ್ಯೆ 3719 ನ್ನು ಪಾವತಿ ಕೂಡ ಮಾಡಿರುತ್ತಾರೆ.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ ಆಶಾ ರವರು ಈ ಗ್ರಾಮ ಪಂಚಾಯಿತಿಯ ಚಾರ್ಜ್‌ನ್ನು ದಿನಾಂಕ:23.12.2015 ರಂದು ತೆಗೆದುಕೊಂಡಿರುತ್ತಾರೆ.
- ಎನ್.ಎಂ.ಆರ್ ಸಂ.3719 ದಿನಾಂಕ:13.10.2015 ರಿಂದ 27.10.2015 ರ ಮೇಲೆ ಶ್ರೀ ಜೆ.ಬಿ ಹೂಗಾರ್ ರವರು ಸಹಿ ಹಾಕಿರುತ್ತಾರೆ. ಆದರೆ ವಾಸ್ತವವಾಗಿ ಅವರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಸಿಂಧನೂರು ಹುದ್ದೆಗೆ ದಿನಾಂಕ:07.12.2015 ರಿಂದ ಕಾರ್ಯನಿರ್ವಹಿಸಿದ್ದಾರೆ.
- ಕಾಮಗಾರಿಗೆ ಬಳಸಲಾದ 2 ಎನ್.ಎಂ.ಆರ್ ಗಳಲ್ಲಿರುವ ಕೂಲಿಕಾರರ ಹಾಜರಾತಿಯನ್ನು ಗ್ರಾಮ ಪಂಚಾಯಿತಿಯ ಗಣಕಯಂತ್ರ ನಿರ್ವಾಹಕರಾದ ಶ್ರೀ ರುದ್ರಮುನಿ ರವರು ದೃಢೀಕರಿಸಿರುತ್ತಾರೆ.
- ಕಾಮಗಾರಿಯ ಅಳತೆಗಳನ್ನು ತಾಂತ್ರಿಕ ಸಹಾಯಕರಾದ ಶ್ರೀ ಎ.ಎನ್ ಮಂಜುನಾಥ ರವರು ದೃಢೀಕರಿಸಿರುತ್ತಾರೆ. ಆದರೆ ದಾಖಲಿಸಿರುವ ಅಳತೆಗಳನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ದೃಢೀಕರಿಸಿರುವುದಿಲ್ಲ.
- ಕಾಮಗಾರಿಗೆ ಬಳಸಲಾದ 2ನೇ ಎನ್.ಎಂ.ಆರ್ ನ್ನು ಎಂ.ಬಿ ಪುಸ್ತಕ ಹಾಗೂ ಹಾಜರಾತಿಯ ದಾಖಲೆಗಳ ಆಧಾರದ ಮೇಲೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ ಆಶಾ ರವರು ಪಾವತಿಸಿರುತ್ತಾರೆ.
- ಕಾಮಗಾರಿ ನಡೆದ ಸಮಯದಲ್ಲಿ ತೆಗೆಯಲಾಗಿದೆ ಎನ್ನಲಾದ ಫೋಟೋಗಳನ್ನು ಕಡತಕ್ಕೆ ಲಗತ್ತಿಸಿದ್ದು ಅವುಗಳನ್ನು ಪರಿಶೀಲಿಸಲಾಗಿ. ಈ ಫೋಟೋಗಳನ್ನು ದಿನಾಂಕ:28.10.2015 ರಂದು ಮಧ್ಯಾಹ್ನ 4.00 ರಿಂದ 4.04 ರ ಒಳಗೆ ತೆಗೆಯಲಾಗಿದ್ದು ದೃಢಪಟ್ಟಿರುತ್ತದೆ. ಅಂದರೆ ಮೊದಲನೇ ಎನ್.ಎಂ.ಆರ್ ಮುಕ್ತಾಯವಾದ ಮರುದಿನ ಕೆಲವು ಕೂಲಿಕಾರರನ್ನು ಕಾಮಗಾರಿ ಸ್ಥಳದಲ್ಲಿ ನಿಲ್ಲಿಸಿ ಫೋಟೋ ತೆಗೆದಿರುವುದು ಕಂಡು ಬರುತ್ತದೆ.
- ಎನ್.ಎಂ.ಆರ್ ಸಂ.5991 ರ ಕ್ರ.ಸಂ.13 ರಲ್ಲಿ ನಮೂದಿಸಲಾದ (ಜಾಬ್ ಕಾರ್ಡ್ ಸಂ.ಕೆಎನ್-23-005-008-008/17-ಎ ರಲ್ಲಿನ ಶ್ರೀಮತಿ ಸರ್ವಮಂಗಳ ರವರು ಬನ್ನಿಗನೂರು ಗ್ರಾಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದಾಗ್ಯೂ ಅವರ ಹೆಸರಿನಲ್ಲಿ 13 ದಿನಗಳ ಎನ್.ಎಂ.ಆರ್ ಸೃಜಿಸಿ ಹಾಜರಾತಿ ಹಾಕಲಾಗಿದೆ.
- ಎನ್.ಎಂ.ಆರ್ ಸಂ.5991 ರ ಕ್ರಸಂ. 14 ರಲ್ಲಿ ನಮೂದಿಸಲಾದ (ಜಾಬ್ ಕಾರ್ಡ್ ಸಂ.ಕೆ.ಎನ್-23-005-008-008/17-ಎ ರಲ್ಲಿನ) ಜಾಬ್ ಕಾರ್ಡ್‌ಗೆ ಸಂಬಂಧಿಸಿದಂತೆ ಶ್ರೀಮತಿ ಬಸವರಾಜೇಶ್ವರಿ ಎಂಬುವವರ ಹೆಸರಿನಲ್ಲಿ 13 ದಿನಗಳ ಎನ್.ಎಂ.ಆರ್ ತೆಗೆದು ಹಾಜರಾತಿ ನಮೂದಿಸಲಾಗಿದೆ. ಆದರೆ ವಾಸ್ತವವಾಗಿ ಶ್ರೀಮತಿ ಬಸವರಾಜೇಶ್ವರಿ ರವರು ಶ್ರೀಮತಿ ಸರ್ವಮಂಗಳ ರವರ ಮಗಳಾಗಿದ್ದು ನಾಲ್ಕು ವರ್ಷಗಳ ಹಿಂದೆ ಮದುವೆಯಾಗಿ ಬನ್ನಿಗನೂರು ಗ್ರಾಮದಿಂದ ಸ್ಥಳಾಂತರಗೊಂಡಿರುತ್ತಾರೆ.
- ಎನ್.ಎಂ.ಆರ್ ಸಂ.5991 ರ ಕ್ರ.ಸಂ 9 ರಲ್ಲಿ ನಮೂದಿಸಲಾದ (ಜಾಬ್ ಕಾರ್ಡ್ ಸಂ:ಕೆಎನ್-23-005-008-008/118 ರಲ್ಲಿನ) ಕು:ಅಯ್ಯಪ್ಪ ರವರ ಹೆಸರಿನಲ್ಲಿ 13 ದಿನಗಳ ಎನ್.ಎಂ.ಆರ್ ಸೃಜಿಸಿ ಹಾಜರಾತಿ ಹಾಕಿ ಕೂಲಿ ಹಣ ರೂ.2652/- ಗಳನ್ನು ಪಾವತಿಸಲಾಗಿದೆ. ಆದರೆ ಕು:ಅಯ್ಯಪ್ಪ ರವರು ಶಾಲಾ ದಾಖಲಾತಿಗಳನ್ನು

ಪರಿಶೀಲಿಸಲಾಗಿ, ಕಾಮಗಾರಿ ನಡೆದ ದಿನಾಂಕದಂದು ಕೆಲಸ ನಿರ್ವಹಿಸಿದ ಕೂಲಿಕಾರರು ಅಪ್ರಾಪ್ತ ವಯಸ್ಕರಾಗಿರುತ್ತಾರೆ. ಆದರೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಡಿ ನೊಂದಾಯಿತರಾಗುವ ಕೂಲಿಕಾರರು ಕಡ್ಡಾಯವಾಗಿ ವಯಸ್ಕರಾಗಿರಬೇಕು ಎಂದು ನಮೂದಿಸಲಾಗಿದೆ.

ಒಟ್ಟಾರೆ ಈ ಪ್ರಕರಣದಲ್ಲಿ ನಡೆದಿದೆ ಎನ್ನಲಾದ ಅವ್ಯಹಾರಕ್ಕೆ ಅಧ್ಯಕ್ಷರಾದ ಶ್ರೀ ಚೆನ್ನನಗೌಡ ಹೊಸಮನೆ ರವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಈ ಕಾಮಗಾರಿ ಅನುಷ್ಠಾನದಲ್ಲಿ ಸ್ವ-ಹಿತಾಸಕ್ತಿಯನ್ನು ತೋರಿಸಿರುತ್ತಾರೆಂದು ತಿಳಿಸಿರುತ್ತಾರೆ.

ಮಾನ್ಯ ಪ್ರಧಾನ ಕಾರ್ಯದರ್ಶಿರವರ ನ್ಯಾಯಾಲಯದಲ್ಲಿ ದಿನಾಂಕ:17.02.2018 ರಂದು ಉಪಲೋಕಾಯುಕ್ತರವರ ವರದಿ ಹಾಗೂ ಸದರಿಯವರು ನೀಡಿರುವ ಲಿಖಿತ ಹೇಳಿಕೆ ಹಾಗೂ ಸದರಿ ಪ್ರಕರಣದಲ್ಲಿರುವ ಎಲ್ಲಾ ದಾಖಲೆಗಳು ಹಾಗೂ ಸಾಕ್ಷ್ಯಧಾರಗಳನ್ನು ಪರಿಶೀಲಿಸಿ ಸರ್ಕಾರವು ಈ ಪ್ರಕರಣದಲ್ಲಿನ ವಾಸ್ತವಾಂಶಗಳನ್ನು ಮನದಟ್ಟು ಮಾಡಿಕೊಂಡು, ಸದರಿ ಆಪಾದಿತರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕಾಮಗಾರಿ ಅನುಷ್ಠಾನದಲ್ಲಿ ಸ್ವ-ಹಿತಾಸಕ್ತಿಯನ್ನು ತೋರಿಸಿ ದುರ್ನಡತೆ ಎಸಗಿರುವುದು ಸಾಬೀತಾಗಿರುವುದರಿಂದ ಸರ್ಕಾರವು ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಎರಡನ್ನೂ ವಜಾಗೊಳಿಸಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/536/ಗ್ರಾಪಂಕಾ/2017**

**ಬೆಂಗಳೂರು, ದಿನಾಂಕ:-03-04-2018.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನಲೆಯಲ್ಲಿ ಶ್ರೀ ಚನ್ನನಗೌಡ, ಅಧ್ಯಕ್ಷರು, ರಾಮತ್ನಾಳ ಗ್ರಾಮ ಪಂಚಾಯಿತಿ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕಾಮಗಾರಿ ಅನುಷ್ಠಾನದಲ್ಲಿ ಸ್ವ-ಹಿತಾಸಕ್ತಿಯನ್ನು ತೋರಿಸಿ ದುರ್ನಡತೆ ಎಸಗಿರುವುದು ಸಾಬೀತಾಗಿರುವುದರಿಂದ ಸರ್ಕಾರವು ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಎರಡನ್ನೂ ವಜಾಗೊಳಿಸಿ ಜಾರಿಗೆ ಬರುವಂತೆ ಆದೇಶಿಸಿದೆ.

(ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಅಪ ಇಲಾಖೆ ರವರಿಂದ ಅನುಮೋದಿತ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

3/4

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಯಚೂರು ಜಿಲ್ಲೆ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ.
3. ಶ್ರೀ ಚನ್ನನಗೌಡ, ಅಧ್ಯಕ್ಷರು, ರಾಮತ್ನಾಳ ಗ್ರಾಮ ಪಂಚಾಯಿತಿ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರಾಮತ್ನಾಳ ಗ್ರಾಮ ಪಂಚಾಯಿತಿ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
6. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.